ಬರೆಯಲ್ಲ ಅಂತಲೇ ಹೇಳಿದೆ. ಆತ ಜೇಮ್ಸ್ ಬಾಲ್ಡ್‌ವಿನ್ ಜೊತೆ ಮಾತಾಡಿದಾಗ ಅವನೊಂದು ಐಡಿಯಾ ಕೊಟ್ಟ. ಅದು ಯಾವಾಗಲೂ ನನ್ನ ವಿಷಯದಲ್ಲಿ ಕ್ಲಿಕ್ ಆಗುವಂಥದ್ದು. ಸರಿ, ಮತ್ತೆ ಲೂಮಿಸ್ ಫೋನ್ ಮಾಡಿ, 'ಮಿಸ್. ಏಂಜೆಲೊ ನಿಮಗೆ ಫೋನ್ ಮಾಡಿ ಇನ್ನುಮುಂದೆ ತೊಂದರೆ ಕೊಡಲ್ಲ. ಆತ್ಮಕತೆಯಂತಹ ಸಾಹಿತ್ಯ ಪ್ರಕಾರವನ್ನು ಬರೆಯುವುದು ಅಸಾಧ್ಯ. ನೀವು ಆ ತರಹದ ಪುಸ್ತಕ ಬರೆಯಲು ಪ್ರಯತ್ನಿಸಬೇಡಿ.' ಅಂದರು. 'ಏನು ಹೇಳ್ತಾ ಇದೀರಾ? ನಾನು ಬರೀತಿನಿ' ಅಂದೆ. ಈ ಟ್ರಿಕ್ ಯಾವಾಗಲೂ ನನ್ನ ವಿಷಯದಲ್ಲಿ ಕೆಲಸ ಮಾಡುತ್ತದೆ. ಹಾಗಂತ ಕೊಚ್ಚಿಕೋತಿಲ್ಲ. ಆದರೆ, ಇದು ನಿಜ.

◆ ನೀವು ಪ್ರತಿ ಪುಸ್ತಕಕ್ಕೂ ಬಹಳ ಮುಖ್ಯವಾದ ವಿಷಯವನ್ನು ಆಯ್ಕೆ ಮಾಡಿಕೊಳ್ಳುವಿರಾ?

ನನ್ನ ಬದುಕಿನಲ್ಲಿ ನಡೆದ ಘಟನೆಗಳಲ್ಲಿ ಕ್ರೌರ್ಯ, ಕರುಣೆ, ಔದಾರ್ಯ, ಹೊಟ್ಟೆಕಿಚ್ಚು ಇಲ್ಲವೇ ಸಂತೋಷ ಪ್ರಮುಖವಾಗಿರುವಂತಹದ್ದನ್ನು ನೆನಪಿಸಿಕೊಳ್ಳುತ್ತೇನೆ. ಬಹುಶಃ ನಾಲ್ಕು ಘಟನೆಗಳ ಬಗ್ಗೆ ಬರೆಯಬಹುದು ಅನ್ನಿಸುತ್ತದೆ. ಅವುಗಳಲ್ಲಿ ಒಂದನ್ನು ಆಯ್ಕೆಮಾಡಿಕೊಳ್ಳುತ್ತೇನೆ. ಅದರಲ್ಲಿ ನಾಟಕೀಯತೆ ಇರಬೇಕೆ ಹೊರತು ಮೆಲೊಡ್ರಾಮ ಇರಬಾರದು.

◆ ನೀವು ನಿರ್ದಿಷ್ಟ ಓದುಗರಿಗಾಗಿ ಬರೆಯುವಿರಾ?

ಮೊದಲು ಕಪ್ಪು ಹುಡುಗಿಯರಿಗಾಗಿ ಪುಸ್ತಕ ಬರೆಯೋಣ ಅಂದುಕೊಂಡೆ. ಏಕೆಂದರೆ, ಹೇಗಿರಬೇಕು ಎಂದು ತಿಳಿಯಲು ಕಪ್ಪು ಹುಡುಗಿಯರಿಗೆ ಓದಲು ಇರುವುದು ಕೆಲವೇ ಪುಸ್ತಕಗಳು. ಆಮೇಲೆ ಅನ್ನಿಸಿತು, ಇನ್ನಷ್ಟು ಜನರನ್ನು ತಲುಪುವಂತೆ ಬರೆಯಬೇಕು. ಆಗ ಕಪ್ಪುಹುಡುಗರು, ಬಿಳಿ ಹುಡುಗಿಯರು, ಬಿಳಿ ಹುಡುಗರು, ಹೀಗೆ ಎಲ್ಲರಿಗಾಗಿ ಬರೆಯಲು ನಿರ್ಧರಿಸಿದೆ.

ಬರೆಯುವಾಗ ನನ್ನ ಮನಸ್ಸಿನಲ್ಲಿರುವುದು ನನ್ನ ಕೌಶಲ್ಯ ಮಾತ್ರ. ನನ್ನ ಕಲೆಯಿಂದಲೇ ಪ್ರೇರಣೆ ಪಡೆಯುತ್ತೇನೆ. ನನಗನ್ನಿಸಿದ್ದನ್ನು ಒಪ್ಪಿಕೊಂಡು ಅತ್ಯುತ್ತಮವಾದದ್ದನ್ನು ಕಲೆಯಲ್ಲಿ ಸೃಷ್ಟಿಸಲು ಪ್ರಯತ್ನಿಸುತ್ತೇನೆ. ತುಂಬಾ ನಿರಾಶಳಾದಾಗ, ಅದು ನನ್ನ ಹತೋಟಿ ಮೀರಿದೆ ಅನ್ನಿಸಿದಾಗ ಓದುಗನ ಬಗ್ಗೆ ಯೋಚಿಸುತ್ತೇನೆ. ಕೆಲಸ ಸಾಗುತ್ತಿರುವಾಗ ಓದುಗರ ಬಗ್ಗೆ ಯೋಚಿಸುವುದು ಅಪರೂಪ.

◆ ಅಂದರೆ, ನೀವು ಹೋಟೆಲ್ ರೂಮಿನಲ್ಲಿ ಕುಳಿತು ಬರೆಯುವಾಗ ನಿಮ್ಮ ಮನಸ್ಸಿನಲ್ಲಿ ಯಾವುದೇ ನಿರ್ದಿಷ್ಟ ಓದುಗರು ಇರುವುದಿಲ್ಲ. ನಿಮಗಾಗಿ ನೀವು ಬರೆಯುತ್ತೀರಿ.

ನಾನು ಮತ್ತು ನನ್ನ ಓದುಗರು. ಓದುಗರಿಗಾಗಿ ಬರೆಯುವುದಿಲ್ಲ ಎಂದರೆ ನಾನೊಬ್ಬಳು ಸುಳ್ಳಿ, ದೊಡ್ಡ ಹಿಪೊಕ್ರೇಟ್ ಅಷ್ಟೇ. ನಾನು ಹೇಳುವುದನ್ನು ಕೇಳಿಸಿಕೊಳ್ಳುವ ಸಹೃದಯತೆ ಇರುವವರಿಗಾಗಿ ಬರೆಯುತ್ತೇನೆ. ಹಾಗಾಗಿ ನನ್ನ ಬರವಣಿಗೆ ನನಗಾಗಿ ಮತ್ತು ನನ್ನ ಓದುಗರಿಗಾಗಿ. ಪಶ್ಚಿಮ ಆಫ್ರಿಕಾದ ಗಹಾನದಲ್ಲಿ, "ಅಂತರಾಳದ ಮಾತು" ಎನ್ನುವ ನುಡಿಗಟ್ಟಿದೆ. ಉದಾಹರಣೆಗೆ ಈ ಮಾತನ್ನು ನೋಡಿ: ಕಳ್ಳನಿಗೆ ಒಡೆಯನ ಕೊಂಬುವಾದ್ಯವನ್ನು ಕದಿಯುವುದು ಕಷ್ಟವಲ್ಲ. ಅವನ ಕಷ್ಟ ಅದನ್ನು ತೆಗೆದುಕೊಂಡು ಹೋಗಿ ಊದುವುದೆಲ್ಲಿ ಅಂತ. ಮೇಲ್ನೋಟಕ್ಕೆ ಕಾಣುವ ಅರ್ಥ ಸುಲಭವಾಗಿ ತಿಳಿಯುತ್ತದೆ. ಅದರ ಒಳಾರ್ಥವನ್ನು ತಿಳಿದರೆ ಅದು ನಿಮ್ಮನ್ನು ಆಳದಲ್ಲಿ ಕಲಕುತ್ತದೆ. ಇದನ್ನೇ ಪಶ್ಚಿಮ ಆಫ್ರಿಕಾದಲ್ಲಿ 'ಅಂತರಾಳದ ಮಾತು' ಎನ್ನುವುದು. ಈ ರೀತಿಯ 'ಅಂತರಾಳದ ಮಾತು'ಗಳನ್ನು ಬರೆಯಲು ನಂಗಿಷ್ಟ. ನಾನು ಬರೆದದ್ದನ್ನು ಓದಿದಾಗ 'ಓಹ್ ಇದೆಷ್ಟು ಸುಂದರವಾಗಿದೆ' ಅಂತ ನಿಮಗನ್ನಿಸಬೇಕು. ಇದರಲ್ಲಿ ಇನ್ನೂ ಏನೋ ಇದೆ, ಮತ್ತೆ ಓದಬೇಕು ಅನ್ನಿಸಬೇಕು. ಬಹಳ ವರ್ಷಗಳ